# ಆಹಾ ಸುದ್ದಿ!

★ ಸಸಿತೋಟ



ಗ್ವಾಟೆಮಾಲಾದಲ್ಲಿ ಪ್ರತಿ ವರ್ಷ ಶುದ್ಧೀಕರಣ ನಡೆಯುತ್ತದೆ. ಮಹಿಳೆಯರಿಂದ ಉಗುಳಿಸಿಕೊಂಡು ಈ ವ್ಯಕ್ತಿ ಶುದ್ಧೀಕರಣ ಮಾಡಿಕೊಳ್ಳುತ್ತಿದ್ದಾನೆ. ನಂತರ ಕುಡುಕರನ್ನು ಕಾಯುತ್ತಾನೆ ಎಂದು ನಂಬಲಾದ ದೇವರಿಗೆ ಹೆಂಡ, ತಂಬಾಕಿನ ನೈವೇದ್ಯ ನಡೆಯುತ್ತದಂತೆ. ಭಕ್ತರಿಗೆ ಯಾವುದು ಪ್ರಿಯವೋ, ಅದನ್ನು ದೇವರೂ ಮೆಚ್ಚಿಕೊಳ್ಳಲೇಬೇಕು, ಬೇರೆ ದಾರಿಯಿಲ್ಲ.

ಜಾರ್ಜಿಯಾದಲ್ಲಿ ವಾಲ್ಟರ್ ಎಂಬುವವನ ಮನೆಗೆ ಬೆಂಕಿ ಬಿತ್ತು. ಹೆಂಡತಿ, ಮಕ್ಕಳು ಸೇರಿದಂತೆ ಎಂಟು ಮಂದಿಗೆ ನಿಮ್ಮ ನಿಮ್ಮ ಜೀವ ರಕ್ಷಿಸಿಕೊಳ್ಳಿ ಎಂದ ವಾಲ್ಟರ್ ಉರಿಯುತ್ತಿರುವ ಮನೆಯೊಳಗೆ ನುಗ್ಗಿದ. ಬಾಗಿಲು ತಲೆ ಮೇಲೆ ಬಿದ್ದರೂ ಲೆಕ್ಕಿಸದೇ ಒಳ ಹೋದನಂತೆ. ಹಣ, ಚಿನ್ನ ತರಲು ಹೋಗಿರಬಹುದು ಎಂದು ಹೊರಗೆ ನೆರೆದ ಜನ ಅಂದುಕೊಂಡಿದ್ದರು. ಆದರೆ ಅವನು ತಂದಿದ್ದು ಬೀಯರ್ ಕ್ಯಾನ್‌ಗಳು. ತಾನೊಬ್ಬ ಕುಡುಕ ಎಂದು ವಾಲ್ಟರ್ ಹೇಳಿಕೊಂಡಿದ್ದಾನಂತೆ. ಅಂದ ಮೇಲೆ ಬೀಯರ್ ಕ್ಯಾನ್‌ಗಳೇ ಅವನ ಅಮೂಲ್ಯ ಆಸ್ತಿ!



ಐವರಿ ಕೋಸ್ಟ್‌ನಲ್ಲಿ ಇತ್ತೀಚೆಗೆ 'ಕರ್ವಿ ಸುಂದರಿ' ಸ್ಪರ್ಧೆ ನಡೆಯಿತು. ವಿಶ್ವ ಸುಂದರಿ ಸ್ಪರ್ಧೆಯ ಮೊದಲ ಸುತ್ತಿಗೂ ಅರ್ಹತೆ ಪಡೆಯಲು ವಿಫಲರಾಗುವ ಈ ಬಡ ಆಫ್ರಿಕಾ ದೇಶದ ಸುಂದರಿಯರಿಗಾಗಿ ಆಯೋಜಕರು ಇದನ್ನು ಏರ್ಪಡಿಸಿದ್ದಾರೆ. ದಢೂತಿಯೇ ಸುಂದರಿ ಎಂದು ಪ್ರಚಾರ ಮಾಡುತ್ತಿದ್ದು, ಪ್ಲಸ್ ಸೈಜ್ ಜನಪ್ರಿಯವಾಗುತ್ತಿದೆಯಂತೆ. ಮುಂದೊಂದು ದಿನ ಸುಂದರಿಯರ ಸ್ಪರ್ಧೆಯಲ್ಲಿ ದಢೂತಿ ದೇಹವೇ ಮಾನದಂಡವಾದರೆ, ಸೈಜ್ ಝೀರೋದವರು ಹಸಿವಿನಿಂದ ನರಳುವುದು ತಪ್ಪಬಹುದು.

ಬ್ರಿಟಿಷ್ ಕೊಲಂಬಿಯಾದಲ್ಲಿ ಈಚೆಗೆ ನಡೆದ ಗಿನ್ನೆಸ್ ದಾಖಲೆ ಮುರಿತದಲ್ಲಿ ಈ 'ಸಿಹಿ ಮೆಣಸು' (ಸ್ವೀಟ್ ಪೆಪ್ಪರ್) ಕೆನ್ನೆಯಲ್ಲಿರುವ ಕೊಕ್ಕೆಯಿಂದ 10 ಪೌಂಡ್ (4.5 ಕೆಜಿ) ತೂಕದ ಸುತ್ತಿಗೆಯನ್ನು ಮೇಲಕ್ಕೆತ್ತಿದ. ದಾಖಲೆಯಿಂದ ಹಣವೇನಾದರೂ ಸಿಕ್ಕಿದರೆ ಕೆನ್ನೆಯ ಕಿಂಡಿ ಮುಚ್ಚಿಕೊಳ್ಳುತ್ತೇನೆ ಎಂದು ಹೆಂಡತಿಗೆ ಹೇಳಿದ್ದಾನಂತೆ ಈ ಭೂಪ. ದಾಖಲೆಗಾಗಿ ಸಿಗುವ ದಾಖಲಾತಿ ಪತ್ರವನ್ನೇ ಕೆನ್ನೆಗೆ ಅಡ್ಡ ಹಿಡಿದುಕೊಂಡು ಅಡ್ಡಾಡಬಹುದು.




ವರ್ಜೀನಿಯಾದಲ್ಲಿ ಮದುವೆ ದಿನ ಬೆಳಿಗ್ಗೆ ಜೋಡಿಯೊಂದು 10 ಕಿ.ಮೀ. ಓಟದಲ್ಲಿ ಭಾಗವಹಿಸಿತು. ಪರಸ್ಪರ ರೋಮಾನ್ಸ್ ಮಾಡುತ್ತ ಮಾಡುತ್ತ ಓಡಿದರು. ವಧು ಉತ್ಸಾಹದಿಂದ ಮುಂದೆ ಮುಂದೆ ಓಡಿದಳು. ವರ ವಾಟ್ಸನ್ ಹಿಂದೆ ಹಿಂದೆ ಬಿದ್ದು ತಪ್ಪಿಸಿಕೊಂಡು ಬಿಟ್ಟ. ಮದುವೆ ಇಷ್ಟವಿಲ್ಲದೆ ವರ ಓಡಿ ಹೋದ ಎಂಬುದಕ್ಕೆ ಇದೇ ಉದಾಹರಣೆ ಇರಬಹುದು.

ಲಿಥುವಾನಿಯಾದ ನೌಜಾಮಿಯೆಸ್ಟಿಸ್ ಎಂಬ ಪುಟ್ಟ ಹಳ್ಳಿಯಲ್ಲಿ ಪ್ರತಿ ವರ್ಷ ಧಾನ್ಯದ ಹುಲ್ಲಿನಲ್ಲಿ ಇಡೀ ಹಳ್ಳಿಯ ಪ್ರತಿರೂಪವನ್ನೇ ನಿರ್ಮಿಸುತ್ತಾರಂತೆ. ಸಾವಿರಾರು ಮಂದಿ ಭೇಟಿ ನೀಡಿದ ನಂತರ ಇಡೀ ಹುಲ್ಲಿನ ಹಳ್ಳಿಗೇ ಬೆಂಕಿ ಕೊಡುವ ಸಂಪ್ರದಾಯವಿದೆಯಂತೆ. ಅಸೂಯೆಯಿಂದ ಇನ್ನೊಬ್ಬರ ಹುಲ್ಲಿನ ರಾಶಿಗೆ ಬೆಂಕಿ ಕೊಡುವ ಮಂದಿ ಈ ಸಂದರ್ಭದಲ್ಲಿ ಚಟ ತೀರಿಸಿಕೊಳ್ಳಬಹುದು.

